ಸ್ ೧೯೦೭ನೆ ಇಸವಿ ನವಂಬರ್ ಮಾಹೆ 11ನೆ ತಾರೀಖಿನಲ್ಲಿ ನಡಿಸಿದ ಹಾಸನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಎಸ್‌ಕ್ವೈರ್, ಎಂ. ಎ., ಪ್ರೆಸಿಡೆಂಟ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ನರಸಿಂಗರಾವ್ ಪೂರ್ಣಯ್ಯ, ಬಿ. ಎ., ಟೈಜರಿ ಅಸಿಸ್ಟೆಂಟ್ ಕಮಿಷನರವರು ಮತ್ತು ವೈಸ್ ಪ್ರೆಸಿಡೆಂಟರು.
,, ಎಂ. ಎ. ನಾರಾಯಣಯ್ಯಂಗಾರ್, ಬಿ. ಎ., ಬಿ. ಎಲ್, ಸೀನಿಯರ್ ಅಸಿಸ್ಟೆಂಟ್ ಕಮಿಷನರವರು.
,, ಎಂ. ಲಕ್ಷ್ಮಣಶಾಸ್ತ್ರಿ, ಬಿ. ಎ., ಜನರಲ್ ಅಸಿಸ್ಟೆಂಟ್ ಕಮಿಷನರವರು.
,, ಸಿ. ರಾಜಾರಾವುರಾವ್, ಎಲ್. ಎಂ. ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಲಕ್ಷ್ಮೀನರಸಿಂಹ್ಮಾಚಾರ್, ಹಾಸನ
,, ಕೆ. ಮಹದೇವಪ್ಪನವರು, ಹಾಸನ.
,, ಕೆ. ತಮ್ಮೈಯ್ಯನವರು, ಬೇಲೂರು.
,, ಹಬಿಬುಲ್ಲಾಸಾಬರು, ಬೇಲೂರು.
,, ಹ. ದಾಸಪ್ಪನವರು, ಅರಸೀಕೆರೆ.
,, ಕೆಂಚರಾಯ ಶೆಟ್ಟರು, ಅರಸೀಕೆರೆ.
,, ಜಿ. ತಿರುನಾರಣೈಯ್ಯಂಗಾರ್ರು, ಚನ್ನರಾಯಪಟ್ಟಣ.
,, ನಂಜಂಣ, ಚನ್ನರಾಯಪಟ್ಟಣ.
,, ಧರಣೈಯ್ಯಶೆಟ್ರು, ಚನ್ನರಾಯಪಟ್ಟಣ.
,, ಮಹಲಿಂಗೆ ಗೌಡರು, ಅರಕಲಗೂಡು.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಅಬ್ದುಲ್ಲಾಸಾಬರು, ಅರಕಲಗೂಡು.

ಗೈರ್ ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ಕೆ. ಪ್ರಹ್ಲಾದರಾವ್, ಹಾರ್ಸ್ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರು.
,, ಎಂ. ಕೆ. ತಿರುಮಲಾಚಾರ್ಯರು, ಹಾಸನ ಡಿಸ್ಟ್ರಿಕ್ಟ್ ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಡಬ್ಲ್ಯು. ಎಲ್. ಕ್ಯಾಫರ್ಡ್ ಸಾಹೇಬರವರು, ಮಂಜರಾಬಾದು.
,, ಐಗೂರು ವುಲ್ಲೇಗೌಡರು, ಮಂಜರಾಬಾದು.
,, ಪುಟ್ಟೇಗೌಡರು, ಮಂಜರಾಬಾದು.
,, ವೆಂಕಟರಾಮೈಯ್ಯನವರು, ಹೊಳೇನರಸೀಪುರ.
,, ಕೊ. ರಾಮಶೆಟ್ಟರು, ಹೊಳೇನರಸೀಪುರ.
,, ಗುರುಲಿಂಗೆಗೌಡರು, ಆಲೂರು.

I. 1906—07ನೆ ಸಾಲಿನ ಖಾಬತು ಹಾಸನ ಡಿಸ್ಟ್ರಿಕ್ಟ್ ಬೋರ್ಡು ಅಡ್ಮಿನಿಸ್ಟ್ರೇಷನ್ ರಿಪೋರ್ಟು ಓದಲಾಯಿತು.

ತೀರ್ಮಾನ.—ಕೇಳಿ ಅನುಮೋದಿಸಲಾಯಿತು.

II. 1900—01ನೆ ಸಾಲಿನ ಬಾಬತ್ತು ಗೊರೂರು ಹೇಮಾವತಿ ಕಡುವು ಕಂಟ್ರಾಕ್ಟುದಾರ ವೀರಡಿ ನರಸಿಂಹನೆಂಬುವನಿಂದ ಬರಬೇಕಾದ 225 ರೂಪಾಯಿಗಳನ್ನು ರಿಮಿಷ್ ಆಗಬೇಕೆಂಬ ಅಂಶವನ್ನು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿಟ್ಟು ತೀರ್ಮಾನದ ನಕಲುಸಹಿ ಗಾರ್ನಿಮೆಂಟು ಆರ್ಡರ್ ಬಗ್ಗೆ ಕಳುಹಿಸಿಕೊಡಬೇಕೆಂದು ವಗೈರೆ ಜನರಲ್ ಮತ್ತು ರೆವಿನ್ಯು ಸೆಕ್ರಟೆರಿಯವರಿಂದ ತಲಪಿದ 1907ನೆ ಸೆಪ್ಟಂಬರ್ 2ನೆ ತಾರೀಖಿನ ಬಾಬತ್ತು 2095 ಎಲ್. ಬಿ. 71—07—2ನೆ ನಂಬರ್ ಡಾಕೆಟ್ಟು ಓದಲಾಯಿತು.

ತೀರ್ಮಾನ.—ಕೆಲವು ತಿಂಗಳ ವರಿಗೆ ಜಂಗಾಲ್ ಉಪಯೋಗಿಸಲು ಕಂಟ್ರಾಕ್ಟರಿಗೆ ಅವಕಾಶ ತಪ್ಪುತೆಂಬ ಅಂಶವನ್ನು ಪರ್ಯಾಲೋಚಿಸುವಲ್ಲಿ ಕಂಟ್ರಾಕ್ಟರು ಬೇಡುವಂತೆ ರಿಮಿಷ್ ಕೊಡುವದು ನ್ಯಾಯವಾಗಿರುತ್ತೆಂತ ತೀರ್ಮಾನಿಸಲಾಯಿತು.

III. ಅರಕಲಗೂಡು ತಾಲ್ಲೂಕು ಕೋಣನೂರು ಯೂನಿಯನ್‌ನಲ್ಲಿರುವ 7 ಜನ ಝಾಡಮಾಲಿಗಳಿಗೆ ಹಾಲಿ ಮಾಹೆಯಾನಾ 4—8—0 ತಲಬು ಕೊಡುತ್ತಾ ಇದೆ. ಈ ಕಮ್ಮಿ ತಲಬಿಗೆ ಇವರುಗಳು ವದಗದೆ ಇರುವದರಿಂದ ಪ್ರತಿ ಇವರುಗೂ ಮಾಹೆಯಾನ 8 ಆಣೆ ತಲಬು ಹೆಚ್ಚಿಸಿ ಕೊಡಬೇಕೆಂದು ವಗೈರೆ ಯೂನಿಯನ್ ಪಂಚಾಯಿತರು ಶಿಫಾರಸು ಮಾಡಿರುವ ತೀರ್ಮಾನದ ವಿಚಾರದಲ್ಲಿ ಅರ್ತಲಗೂಡು ತಾಲ್ಲೂಕು ಅಮಲ್ದಾರ್‌ರಿಂದ ತಲಪಿದ 1907ನೆ ಅಕ್ಟೋಬರ್ 25ರ ಮುರ್ಕುಂ 503ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ.—ಅಮಲ್ದಾರ್ರು ಶಿಫಾರ್ಸಿನಂತೆ ಪ್ರಸಕ್ತವಾದ ತಲಬನ್ನು 5 ರೂಪಾಯಿಗೆ ಹೆಚ್ಚಿಸಬೇಕೆಂತ ತೀರ್ಮಾನಿಸಲಾಯಿತು.

IV. ಹರ್ಹಾಬಾಳ್‌ನಲ್ಲಿರುವ ಭಾವಿ ರಿಪೇರಿ (ಬಜ್ಜೆಟ್ಟಿನಲ್ಲಿ ದಾಖಲಾದ ಕೆಲಸ) ಗೋಸ್ಕರ 136 ರೂಪಾಯಿ ಅಂದಾಜನ್ನು ಸೀನಿಯರ್ ಅಸಿಸ್ಟೆಂಟ್ ಕಮಿಷನರವರಿಂದ ತಲಪದ 7—9—07ನೆ ಮತ್ತು ೦ 16ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ.—ಪ್ರಸಕ್ತವಾದ ಅಂದಾಜವನ್ನು ಮಂಜೂರ್ಮಾಡಬೇಕೆಂತ ತೀರ್ಮಾನಿಸಲಾಯಿತು.

V(1). ಹಾಲ್‌ಸಾಲ್‌ನಲ್ಲಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್ಮೆಂಟ್‌ನವರಿಂದ ನಡಿಯಬೇಕಾದ A ಪಬ್ಲಿಕ್ ವರ್ಕ್ಸ್‌ಗಳ ಬಾಬತು ಅಂದಾಜುಗಳು ಪ್ರೆಸಿಡೆಂಟರಿಂದ ಕ್ವಾರ್ಟರ್ ಸೆಷ್ಷನ್ ಆದವುಗಳ್ಯಾವವಂದರೆ :—

ಕಾಂಗಾರಿ ಹೆಸರು.			ಅಂದಾಜು ಮೊಬಲಗು.	
ಶುಕ್ರವಾರಸಂತೆ	IIIನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆ ರಿಪೇರಿ	...	39	ಹಾಲ್‌ಸಾಲ್ ಡಿಸ್ಟ್ರಿಕ್ಟ್ ಫಂಡು ಬಜ್ಜೆಟ್ಟು
ಹಾನುಬಾಳು	ಡಿಟೋ		115	ಎ. ಪಬ್ಲಿಕ್ ವರ್ಕ್ಸ್ II. ರಿಸರ್ವ್
ಕೆಂಪುಹೊಳೆ	ಡಿಟೋ		22	510 ರೂಪಾಯಿಗಳಲ್ಲಿ.
ಡಿಟೋ	ಡಿಟೋ	ಚಾಟು ಕಾಂಗಾರಿಗೆ ...	18	
ಮಾರ್ನಹಳ್ಳಿ	ಡಿಟೋ	ಡಿಟೋ ...	32	
ಶುಕ್ರವಾರಸಂತೆ	ಡಿಟೋ	ಡಿಟೋ ...	28	ಡಿಟೋ A ಪಬ್ಲಿಕ್ ವರ್ಕ್ಸ್ I. ರಿಸರ್ವ್
ಬನ್ನೆ	ಡಿಟೋ	ಡಿಟೋ ...	21	500 ರೂಪಾಯಿಗಳಲ್ಲಿ.
ಹಾನುಬಾಳು	ಡಿಟೋ	ಡಿಟೋ ...	25	

V(2). ಪ್ರೆಸಿಡೆಂಟರವರಿಂದ ಮಂಜೂರಾದ ಹಾಲ್‌ಸಾಲ್ ಬಜ್ಜೆಟ್ಟಿನಲ್ಲಿ ದಾಖಲಾಗಿರುವ ಬಿ. ಪಬ್ಲಿಕ್ ವರ್ಕ್ಸ್‌ಗಳ ಬಾಬತು ಅಂದಾಜುಗಳನ್ನು ಓದಲಾಯಿತು.

ತಾಲ್ಲೂಕಿನ ಹೆಸರು.	ಕಾಂಗಾರಿ ಹೆಸರು.	ಅಂದಾಜು ಮೊಬಲಗು.
		ರೂ.
1. ಮಂಚರಾಬಾದು ...	ಸಕಲೇಶಪುರದಿಂದ ಕೆಂಜಿಮ್ಮನ ಹೊಸಕೋಟಗೆ ಹೋಗುವ ಛಂಡಿ ಜಾಡು ಅಭಿವೃದ್ಧಿಗೋಸ್ಕರ.	200
2. ಡಿಟೋ ...	ಹನಸೆ ಶನಿವಾರಸಂತೆ ರಸ್ತೆ ರಿಪೇರಿ ...	40
3. ಡಿಟೋ ...	ಹೊಸಕೋಟೆ ಈಚಲುಬೀಡು ರಸ್ತೆ ರಿಪೇರಿ ...	40
4. ಡಿಟೋ ..	ಮಾರ್ನಹಳ್ಳಿ ಮುಸಾಫರ್‌ಖಾನ ರಿಪೇರಿ ...	100
5. ಡಿಟೋ ..	ಶುಕ್ರವಾರಸಂತೆ ಛತ್ರದ ರಿಪೇರಿ ...	100
6. ಅರಸೀಕೆರೆ ...	ಮಹಮ್ಮದ್‌ಪುರದಲ್ಲಿನ ಭಾವಿಗೆ ಕಲ್ಲು ಕೆಲಸ ...	300
7. ಡಿಟೋ ...	ಹೊಳಲ್‌ಕೆರೆಯಲ್ಲಿನ ಡಿಟೋ ...	298
8. ಡಿಟೋ ...	ಹರಳುಕಟ್ಟೆ ಡಿಟೋ ...	298
9. ಚನ್ನರಾಯಪಟ್ಟಣ ...	ಹಿರಿನಾವೆಯಲ್ಲಿ ಚರಂಡಿ ಕಟ್ಟುವದರ ಮೂಲಕ ಗ್ರಾಮ ಪಾಕೀಜಾ ಅಭಿವೃದ್ಧಿಪಡಿಸುವದಕ್ಕೋಸ್ಕರ.	206
10. ಡಿಟೋ ...	ಶ್ರವಣಬೆಳಗುಳದಲ್ಲಿ ಚರಂಡಿ ಕಟ್ಟುವದಕ್ಕೆ ...	202
11. ಡಿಟೋ ...	ಚನ್ನರಾಯಪಟ್ಟಣದ ಮುಸಾಫರ್‌ಖಾನ ರಿಪೇರಿ ...	100
12. ಡಿಟೋ ...	ಹಿರಿಸಾವೆ ಡಿಟೋ ...	150
13. ಡಿಟೋ ...	ರಾಜೀನಹಳ್ಳಿಯ ಭಾವಿ ಕಲ್ಲು ಕೆಲಸ ...	374
14. ಡಿಟೋ ...	ಹೊಸೂರು ಡಿಟೋ ..	160
15. ಹೊಳೇನರಸೀಪುರ ...	ಮಾವಿನಕೆರೆ ಮುಸಾಫರ್‌ಖಾನೆ ರಿಪೇರಿ ...	50
16. ಡಿಟೋ ...	ಮಾವಿನಕೆರೆಯಿಂದ ಇಲಾಲ-ಹಾರ್ಸ ರಸ್ತೆಗೆ ಕೀರುವ ಗಾಡಿ ಜಾಡು ರಿಪೇರಿ.	25
17. ಡಿಟೋ ...	ಗಂಗೂರು ಭಾವಿ ಆಳಪಡಿಸಿ ಕಲ್ಲುಕಟ್ಟುವದು	299
18. ಡಿಟೋ ...	ಸೀಗೇಕಲ್ಲು ಬಟ್ಟದಿಂದ ಹೊಳೇ ನರಸೀಪುರಕ್ಕೆ ಹೋಗುವ ಗಾಡಿ ಜಾಡು ರಿಪೇರಿ.	80
19. ಅರಕಲಗೂಡು ...	ಕೊಣನೂರಲ್ಲಿ ಚರಂಡಿ ಕಟ್ಟುವದಕ್ಕೋಸ್ಕರ ...	131
20. ಆಲೂರು ಸಬ್ ತಾಲ್ಲೂಕು ...	ಆಲೂರು ಪೇಟೆಯಿಂದ ಕಾರ್ಜವಳ್ಳಿ ಮೂಲಕ ಬೇಲೂರು ತಾಲ್ಲೂಕು ಎಲ್ಲೆ ವರಿಗೆ ಹೋಗುವ ಗಾಡಿ ಜಾಡು ರಿಪೇರಿ.	150
		3,303

ತೀರ್ಮಾನ.—ಮಂಜೂರಾಗಿರುವದನ್ನು ಅನುಮೋದಿಸಿ ಇರುತ್ತೆಂತ ತೀರ್ಮಾನಿಸಲಾಯಿತು.

VI. ಇದರಡಿ ನಮೂದಿಸಿರುವವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಗೆ ಓದಲಾಯಿತು.

(1) 1907—08ನೆ ಸಾಲಿಗೋಸ್ಕರ ಯೂನಿದ್ರ್ಗಳ ಬಾಬತು ಬಡ್ಜೆಟ್ ಸ್ಯಾಂಕ್ಷನ್ ಆಗಿರುತ್ತೆಂಬ ಬಗ್ಗೆ ತಲಪಿದ 28—10—07ರ ಮುಕ್ಕಂ 3690-1—ಎಲ್. ಬಿ. 98—07-2ನೆ ನಂಬರ್ ಪ್ರೊಸೀಡಿಂಗ್ಸ್.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

(2) ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ರಿಪೇರಿ ವಗೈರೆ ಆಗತಕ್ಕ ಬಗ್ಗೆ ತಮಾರಾದ ಅಂದಾಜುಗಳನ್ನು ಡಿಸ್ಟ್ರಿಕ್ಟು ಮತ್ತು ಮುನಸಿಪಲ್ ಬೋರ್ಡುಗಳ ಪ್ರೆಸಿಡೆಂಟರವರ ಅಭಿಪ್ರಾಯಕ್ಕು ಮತ್ತು ಕೌಂಟರ್ ಸೈನ್ ಬಗ್ಗು ಕಳುಹಿಸಿಕೊಡತಕ್ಕ ಬಗ್ಗೆ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರುಗಳಿಗೆ ತಿಳುವಳಿಕೆ ಕೊಡಿಸಬೇಕೆಂತ ವಗೈರೆ ಚೀಫ್ ಇಂಜನಿಯರವರಿಗೆ ಸೀನಿಯರ್ ಸರ್ಜನ್ ಸಾಹೇಬರು ಬರಿಸಿರತಕ್ಕ 28—10—07ರ ಮುಕ್ಕಂ 2042ನೆ ನಂಬರು ಲೆಟರು ಸದರಿಯವರ ವೇಲ್ತಂಡ ಮುಕ್ಕಂ ನ 2043-52ನೆ ನಂಬರು ಮೆಮೊ ಸಂಗಡ ತಲಪಿದ್ದನ್ನು ಓದಲಾಯಿತು.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

VII. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸ್ಥಾಪಿಸಿರುವ ಕೋಮಿಯಂ ಕಂಪೆನಿಯವರು ಡಿಸ್ಟ್ರಿಕ್ಟು ಫಂಡ್ ರಸ್ತೆ ಮೇಲೆ ಭಾರಿಯಾದ ಮೆಷಿನೆರಿ ಸಾಮಾನುಗಳನ್ನು ಸಾಗಿಸುವದರಿಂದ ರಸ್ತೆ ಕೆಡುತ್ತೆಂತಲೂ ಇದನ್ನು ಸರಿಯಾದ ಸ್ಥಿತಿಯಲ್ಲಿ ಇಡಿಸಲು ಸದರಿ ಕಂಪೆನಿಯವರಿಂದ ಕಂಟ್ರಬ್ಯೂರ್ಷ ತೆಗದುಕೊಳ್ಳುವ ವಿಚಾರದಲ್ಲಿ ತುಮಕೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರು ಗಾರ್ನಮೆಂಟಿಗೆ ಬರೆಸಿದ 21—10—07ರ ಮುಕ್ಕಂ 31ನೆ ನಂಬರು ಲೆಟರು ಮತ್ತು ಇದರ ಮೂಲಪೂಛಿಗಳ ಕಾಪಿಗಳನ್ನು ಈ ಡಿಸ್ಟ್ರಿಕ್ಟು ಬೋರ್ಡಿನೊಂದಿಗೆ ಆಲೋಚಿಸಿ ಏನು ಕ್ರಮ ಜರಿಗಿಸಬಹುದೆಂಬ ಬಗ್ಗೆ ಜವಾಬು ಅಪೇಕ್ಷಿಸಿ ಜನರಲ್ ಮತ್ತು ರೆವಿನ್ಯು ಸೆಕ್ರಿಟರಿಯವರಿಂದ ತಲಪಿದ 8—11—07ರ ಮುಕ್ಕಂ 4125—ಎಲ್. ಬಿ. 143—07-2ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ. ಗಾರ್ನಮೆಂಟಿಗೆ ತುಮಕೂರು ಡೆಪ್ಯುಟಿ ಕಮಿಷನರವರು ಬರಿಸಿರುವ 21—10—07ರ ಮುಕ್ಕಂ 31ನೆ ನಂಬರ್ ಲೆಟರ್‌ನಲ್ಲಿನ ಅಭಿಪ್ರಾಯಕ್ಕೆ ಈ ಬೋರ್ಡಿನವರು ಒಪ್ಪುತ್ತಾರೆ. ಪ್ರಸಕ್ತವಾದ ರಸ್ತೆಯನ್ನು ಸಾಧಾರಣವಾದ ಆವುದು ರಫ್ತಿಗೆ ಅನುಕೂಲಿಸುವ ಸ್ಥಿತಿಯಲ್ಲಿ ಇಡಲು ಡಿಸ್ಟ್ರಿಕ್ಟು ಫಂಡಿನಿಂದ ಸಾಧ್ಯವಾದಷ್ಟು ಮೊಬಲಗು ಖರ್ಚುಮಾಡಲು ವಿಶೇಷ ಪ್ರಯತ್ನ ಪಡುತ್ತಿರುವದರಿಂದ ಕೋಮಿಯಂ ಕಂಪನಿಯವರ ಬಹಳವಾದ ಆವುದು ರಫ್ತಿನನುಸಾರವಾಗಿ ರಸ್ತೆಯನ್ನು ಸರಿಪಡಿಸಲು ಡಿಸ್ಟ್ರಿಕ್ಟು ಫಂಡಿನಲ್ಲಿ ಹಣವಿಲ್ಲದ್ದರಿಂದ ಪ್ರಸಕ್ತವಾದ ಕೆಲಸಕ್ಕೆ ಹೆಚ್ಚಾಗಿ ಬೇಕಾಗುವ ಮೊಬಲಗು ಮೇಲ್ಕಂಡ ಕಂಪನಿಯಿಂದ ಕಂಟ್ರಬ್ಯೂರ್ಷ ತರೀಖಾಗಿ ವಸೂಲಿನಿಂದಲಾಗಲಿ ಅಥವಾ ಇತರ ಬಾಬಿನ ಹಣದಿಂದಲಾಗಲಿ ವದಗಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

VIII. ಇದರಡಿ ನಮೂದಿಸಿರುವ ಮೆಂಬರುಗಳು ಮೀಟಿಂಗಿಗೆ ಹಾಜರಾಗಲು ಅನುಕೂಲವಿಲ್ಲವೆಂಬ ಬಗ್ಗೆ ಬರೆಸಿದ ಲೇಖನಗಳನ್ನು ಓದಲಾಯಿತು.

1. ಮಿ|| ಡಬ್ಲ್ಯು. ಎಲ್. ಕ್ಯಾಫರ್ಡ್ ಸಾಹೇಬರವರು.
2. ,, ಐಗೂರು ಮಲ್ಲೇಗೌಡರು.
3. ,, ಪುಟ್ಟೇಗೌಡರು.
4. ,, ರಾಮಕೆಟ್ಟರು.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

IX. ಬರುವ ಮೀಟಿಂಗನ್ನು 1908ನೆ ಇಸವಿ ಫೆಬ್ರವರಿ 8ನೆ ತಾರೀಖಿಗೆಂತ ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸ್ಯೆಯ್ಯಂಗಾರ್,
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

1907ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 28ರಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್‌ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗದ ಮೆಂಬರುಗಳು.

1. ಮಿ|| ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್, ಮತ್ತು ಪ್ರೆಸಿಡೆಂಟ್.
2. ,, ಆರ್. ಟಿ. ಮುಕದೇವರಾವ್, ಅಸಿಸ್ಟೆಂಟ್ ಕಮಿಷನರ್ ಶಿವಮೊಗ್ಗ ಡಿವಿಜ್.
3. ,, ಎ. ವೇದಾಂತದೇಶಿಗಂ ಅಯ್ಯಂಗಾರ್, ಟ್ರೆಜರ ಅಸಿಸ್ಟೆಂಟ್ ಕಮಿಷನರ್ ಮತ್ತು ವೈಸ್ ಪ್ರೆಸಿಡೆಂಟ್.
4. ,, ಮಹಮ್ಮದ್ ಉಸ್ಮಾನ್ ಸಾಹೇಬರವರ, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್.
5. ,, ಬಿ. ರಾಮಯ್ಯ, ಅಕೌಂಟಿಯಟಿಂಗ್ ಡೆಪ್ಯುಟಿ ಆಡಿಟರ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

6. ಮಿ|| ನಾಡಿಗಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
7. ,, ಹಾಗರ್ತಿ ದ್ಯಾವಪ್ಪನವರು, ತೀರ್ಥಹಳ್ಳಿ ತಾಲ್ಲೂಕು.